ಅ.ದಾ.ನಂ.108/2022
ಪಿ.ಡಬ್ಲ್ಯು-2

ದಿನಾಂಕ: 19.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲು: ಶ್ರೀ.ಪಿ.ಪಿ.ಎನ್. ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ.**

ವಾದಿಯನ್ನು ನಮ್ಮ ಊರಾದ ಸಿದ್ದೆವಾಡಿ ಗ್ರಾಮದ ವ್ಯಕ್ತಿ ಕೊಟ್ಟು ಮದುವೆ ಮಾಡಿರುತ್ತಾರೆಂದರೆ ಸರಿ. ವಾದಿ ನನ್ನ ಸಂಬಂಧಿಕರು ಅಲ್ಲ. ಆದರೆ ನಮ್ಮ ಮನೆಯ ಹತ್ತಿರ ಅವರ ಮನೆ ಇದೆ. ನ್ಯಾಯಾಲಯಕ್ಕೆ ಬರಲು ನನಗೆ ವಾದಿ ಕರೆದುಕೊಂಡು ಬಂದಿರುತ್ತಾರೆಂದರೆ ಸರಿ. ನನಗೆ ನ್ಯಾಯಾಲಯದಿಂದ ಯಾವುದೇ ಸಮನ್ಸ ಬಂದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮನೆತನದ ಬಗ್ಗೆ ನನಗೆ ಗೊತ್ತಿಲ್ಲ. ಅವರ ಕುಟುಂಬ ಸದಸ್ಯರ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿ ಮನೆತನಕ್ಕೆ ಹಿರೆಪಡಸಲಗಿ ಗ್ರಾಮದಲ್ಲಿ ಏಳುವರೆ ಎಕರೆ ಜಮೀನು ಇರುತ್ತದೆ. ಅದರ ಸರ್ವೆ ನಂಬರ ಗೊತ್ತಿಲ್ಲ. ಸದರಿ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಂತ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಯಾರಿಂದ, ಹೇಗೆ ಯಾರಿಗೆ ಬಂದಿರುತ್ತವೆಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನ ಮುಖ್ಯವಿಚಾರಣೆಯಲ್ಲಿ ಬರೆಸಿಲ್ಲ. ದಾವಾ ಆಸ್ತಿಗಳಲ್ಲಿ 3 ನೇ ಪ್ರತಿವಾದಿಯೇ ಕಬ್ಬನ್ನು ಬೆಳೆದು ಕಾರ್ಖಾನೆಗೆ ಕಳುಹಿಸುತ್ತಾನೆ ಮತ್ತು ಆತನೇ ಅವುಗಳ ಕಬ್ಜಾ ವಹಿವಾಟಿಯಲ್ಲಿದ್ದಾನೆಂದರೆ ಸರಿ. ವಾದಿ ದಾವಾ ಆಸ್ತಿಗಳ ಕಬ್ಜೆಯಲ್ಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆದರೆ ಹೋಗಿ ಬಂದು ಮಾಡುತ್ತಾರೆ. ವಾದಿ ಮತ್ತು ಪ್ರತಿವಾದಿಯರ ನಡುವೆ ಪಾಲುವಾಟ್ನಿಯಾದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಪಾಲು ವಾಟ್ನಿ ಆಗಿಲ್ಲ ಅಂತ ವಾದಿ ಹೇಳಿದ್ದರಿಂದ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ. 1 ನೇ ಪ್ರತಿವಾದಿಗೆ 3 ನೇ ಪ್ರತಿವಾದಿ ಒಬ್ಬನೇ ಮಗ ಇದ್ದು, ಆತನ ಮೇಲಿನ ಪ್ರೀತಿಯಿಂದ ತನ್ನ ಸ್ವ-ಇಚ್ಛೆಯಂತೆ ಎಲ್ಲಾ ಆಸ್ತಿಗಳ ಆತನ ಹೆಸರಿಗೆ ಬಿಟ್ಟುಕೊಟ್ಟಿರುತ್ತಾನೆಂದರೆ ನಾನು ಶಾಲೆ ಕಲಿತಿಲ್ಲ ನನಗೆ ಗೊತ್ತಿಲ್ಲವೆಂದು ನುಡಿಯುವರು. 3 ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಖೊಟ್ಟಿಯಾಗಿ ತನ್ನ ಹೆಸರಿಗೆ ಮಾಡಿಕೊಂಡಿರುತ್ತಾನೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2005 ನೇ ಸಾಲಿನಲ್ಲಿಯೇ ಅವರ ಕುಟುಂಬದಲ್ಲಿ ಪಾಲುವಾಟ್ನಿಯಾಗಿದ್ದು, ಈಗ ಪಾಲುವಾಟ್ನಿ ಮಾಡಿಕೊಳ್ಳಲು ಯಾವುದೇ ಆಸ್ತಿಗಳು ಉಳಿದಿಲ್ಲ ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತು ಎಂದರೆ ಸರಿಯಲ್ಲ. ವಾದಿ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ಇಲ್ಲ. ವಾದಿಗೆ ಅನುಕೂಲವಾಗಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

[ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.]
ಓ.ಹೇ.ಕೇ.ಸರಿ ಇದೆ.

ಸಹಿ/-
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು,
ಜಮಖಂಡಿ.